ಓ ಎಸ್ ನಂ. 99/2019
ಡಿ ಡಬ್ಲ್ಯೂ: 1
ದಿನಾಂಕ 01-07-2023 ರಂದು ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ವಾದಿ ಪರಃ ಶ್ರೀಮತಿ ಬಿ ಆರ್ ಆರ್ ವಕೀಲರಿಂದಃ

ನಾನು 25/12/1980 ರಂದು ಜನಿಸಿರುತ್ತೇನೆ. ನನ್ನ ತಂದೆ ಆರೋಗ್ಯ ಮೇಲ್ವಿಚಾರಕರಾಗಿ ಕೆಲಸ ಮಾಡುತ್ತಿದ್ದಾರೆ. ನನ್ನ ತಾಯಿ ಬಳ್ಳೆಕೆರೆಯಲ್ಲಿ ವಾಸ ಇದ್ದಾರೆ ಎಂದರೆ ನಿಜ. ವಾದಿ ನನ್ನ ತಾಯಿಯ ಅಕ್ಕನ ಮಗಳಾಗಬೇಕು. ನನ್ನ ತಾಯಿ ಮತ್ತು ವಾದಿಯ ತಾಯಿ ಇಬ್ಬರು ಸಹೋದರಿಯರು ಎಂದರೆ ನಿಜ. ನನ್ನ ತಾಯಿಯ ತಂದೆ ಮತ್ತು ವಾದಿಯ ಅಜ್ಜನ ಹೆಸರು ಚನ್ನಬಸಪ್ಪ. ವಾದಿಗೆ ಸಾವಿತ್ರಮ್ಮ ಮತ್ತು ಸರೋಜಮ್ಮ ಎಂಬ ಇಬ್ಬರು ಸಹೋದರಿಯರು ಇದ್ದಾರೆ ಎಂದರೆ ನಿಜ. ಪಂಚಾಕ್ಷರಿ ಮತ್ತು ಶಿವಶಂಕರ್ ವಾದಿಯ ಸಹೋದರರು ಎಂದರೆ ನಿಜ.

ನನ್ನ ಅಜ್ಜ ಚನ್ನಬಸಪ್ಪರವರಿಗೆ ಹನುಮಂತಪ್ಪ ಎಂಬ ಸಹೋದರರು ಇದ್ದರು ಎಂದರೆ ನಿಜ. ಸದರಿ ಹನುಮಂತಪ್ಪನವರಿಗೆ ಮದುವೆಯಾಗಿರಲಿಲ್ಲ ಎಂದರೆ ನಿಜ. ಹನುಮಂತಪ್ಪನವರು ಸಾಯುವ ಮೊದಲು ನನ್ನ ತಾಯಿ, ವಾದಿ ತಾಯಿ ಮತ್ತು ಚನ್ನಬಸಪ್ಪನವರ ಜತೆ ಇದ್ದರು ಎಂದರೆ ಇರಬಹುದು. ಚನ್ನಬಸಪ್ಪ ಮತ್ತು ಹನುಮಂತಪ್ಪನವರನ್ನು ನೋಡಿಕೊಳ್ಳಲು ವಾದಿಯ ಸಹೋದರಿ ಸಾವಿತ್ರಮ್ಮನವರು ಬಳ್ಳೆಕೆರೆಯಲ್ಲಿ ವಾಸ ಇದ್ದರು

ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಚನ್ನಬಸಪ್ಪ ಮತ್ತು ಹನುಮಂತಪ್ಪನವರು ಮರಣ ಹೊಂದುವ ಕಾಲಕ್ಕೆ ಸಾವಿತ್ರಮ್ಮ ಅಲ್ಪವಯಸ್ಕರಾಗಿದ್ದರು ಎಂದು ನುಡಿದಿರುತ್ತಾರೆ.

ವಾದಿಯ ತಾಯಿಯವರನ್ನು ದೇವನೂರು ಗ್ರಾಮದ ಹಳ್ಳದಹಳ್ಳಿಗೆ ಕೊಟ್ಟು ಮದುವೆ ಮಾಡಲಾಗಿದೆ ಎಂದರೆ ನಿಜ. ನನ್ನ ತಾಯಿಯನ್ನು ಬಳ್ಳೆಕೆರೆಗೆ ಕೊಟ್ಟು ಮದುವೆ ಮಾಡಲಾಗಿದೆ ಎಂದರೆ ನಿಜ. ಚನ್ನಬಸಪ್ಪ ಮತ್ತು ಹನುಮಂತಪ್ಪನವರು ಬಳ್ಳೆಕೆರೆಯಲ್ಲಿ ವಾಸ ಇದ್ದರು ಎಂದರೆ ನಿಜ. ನನ್ನ ತಾಯಿ ಮತ್ತು ವಾದಿ ತಾಯಿಯ ಮದುವೆಯಾದ ನಂತರ ಚನ್ನಬಸಪ್ಪನವರು ನನ್ನ ತಾಯಿಯ ಜತೆಯಲ್ಲಿ ಇದ್ದರು. ಹನುಮಂತಪ್ಪನವರು ಸಹ ನನ್ನ ತಾಯಿ ಜತೆ ವಾಸ ಇದ್ದರು ಎಂದರೆ ನಿಜ. 1980 ಕ್ಕೂ ಮೊದಲು ನಮ್ಮ ಕುಟುಂಬದಲ್ಲಿ ನಡೆದ ವ್ಯವಹಾರದ ಬಗ್ಗೆ ನನಗೆ ವೈಯುಕ್ತಿಕ ಮಾಹಿತಿ ಇಲ್ಲ ಎಂದರೆ ನಿಜ. ಸಾಕ್ಷಿ ಮುಂದುವರೆದು ನನ್ನ ತಾಯಿಯಿಂದ ವಿಚಾರಗಳನ್ನು ತಿಳಿದುಕೊಂಡಿರುತ್ತೇನೆ ಎಂದು ನುಡಿದಿರುತ್ತಾರೆ. ನನ್ನ ತಾಯಿಗೆ ಎಲ್ಲಾ ಮಾಹಿತಿ ಇದೆ ಎಂದರೆ ನಿಜ. ನನ್ನ ತಾಯಿಗೆ ನ್ಯಾಯಾಲಯಕ್ಕೆ ಬಂದು ಸಾಕ್ಷಿ ಹೇಳಲು ತೊಂದರೆ ಇಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನನ್ನ ತಾಯಿಗೆ ಹೃದಯ ಸಂಬಂದ ಸಮಸ್ಯೆ ಇದೆ ಎಂದು ನುಡಿದಿರುತ್ತಾರೆ.

ದಾವೆಯನ್ನು ಯಾವ ಆಸ್ತಿಗಳಿಗೆ ಸಂಬಂದಪಟ್ಟಂತೆ ಹಾಕಲಾಗಿದೆ ಎಂದು ನಾನು ತಿಳಿದುಕೊಂಡಿರುತ್ತೇನೆ. ದಾವಾ ಐಟಂ ನಂ.2 ಮತ್ತು 3 ರ ಆಸ್ತಿಗಳು ಮೂಲತಃ ಚನ್ನಬಸಪ್ಪನವರಿಗೆ ಸೇರಿದ್ದು

ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನನ್ನ ತಾಯಿ ಸದರಿ ಆಸ್ತಿಗಳು ಖರೀದಿಸಿರುತ್ತಾರೆ ಎಂದು ನುಡಿದಿರುತ್ತಾರೆ.

ಮುಂದುವರೆದ ಪಾಟೀ ಸವಾಲನ್ನು ಕೋರಿಕೆಯ ಮೇರೆಗೆ ಮುಂದೂಡಲಾಯಿತು.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರದನ್ಯಾದಂ., ಕಡೂರು.